

## ನಕ್ಕುಬಿಡಿ

ಪತ್ನಿ: ಮಾತಾಡ್ತಾ ಮಾತಾಡ್ತಾ ನಮ್ಮ ಮದುವೆಯಾಗಿ 25 ವರ್ಷ ಆಗಿ ಹೋಯ್ತು ಕಣ್ರೀ.

ಪತಿ: ಅದು ನಿಂಗೆ ಕಣೆ, ನಂಗಂತೂ ಕೇಳ್ತಾ ಕೇಳ್ತಾ ಇಪ್ಪತ್ತೈದು ವರ್ಷ ಆಗಿ ಹೋಯಿತು!

***

ಆನ್ ಲೈನ್ ತರಗತಿಯ ಕೊನೆಯಲ್ಲಿ ಶಾಲಾ ಮುಖ್ಯಶಿಕ್ಷಕರ ರವಾನಿಸಿದ ಸಂದೇಶ, 'ವಾರ್ಷಿಕ ಶಾಲಾ ಪ್ರವಾಸದ ಪ್ರಯುಕ್ತ ಈ ವರ್ಷ ವಿದ್ಯಾರ್ಥಿಗಳಿಗೆ ನಮ್ಮ ಶಾಲಾ ಪರಿಸರವನ್ನು ಸಂದರ್ಶಿಸುವ ಏರ್ಪಾಟು ಮಾಡಲಾಗುವುದು!'

***

ಅಮ್ಮಾವ್ರ ಗಂಡ ಗುಂಡನ ಸ್ಪಷ್ಟೀಕರಣ, 'ನನಗೆ ನನ್ನ ಪತ್ನಿಯ ಮಾತುಗಳನ್ನು ಆಲಿಸುವುದು ಅನಿವಾರ್ಯವಾಗಿದೆ. ಏಕೆಂದರೆ ಅವಳು ನನ್ನನ್ನು ಅವಳ ದೇವರು (ಪತಿ ಪರಮೇಶ್ವರ) ಎಂದು ಪರಿಗಣಿಸುತ್ತಾಳೆ. ದೇವರು ಯಾವತ್ತೂ ತನ್ನ ಭಕ್ತರ ವಶದಲ್ಲಿ ಇರುತ್ತಾನೆ ತಾನೆ?'

***

ಪ್ರಸಕ್ತ ಪರಿಸ್ಥಿತಿ: ಕೊರೊನಾ ತನ್ನ ಎರಡನೇ ಅಲೆಯ ಆರ್ಭಟವನ್ನು ಮುಗಿಸಿಕೊಂಡು, ತದನಂತರ ಜನರ ಅಂತರ ಕಾಯ್ದುಕೊಳ್ಳುವಿಕೆಯ ವರ್ತನೆಯಿಂದ ಮುನಿದು, ಹೆಂಡತಿ ತವರು ಮನೆಗೆ ಹೋದ ಹಾಗೆ ಹೋಗಿದೆ. ಅದನ್ನು ಸಂತೈಸಿ ಕರೆತರಲು ಈಗ ಮತ್ತದೇ ಜನರು ಗುಂಪುಗುಂಪಾಗಿ ಕುಲು ಮನಾಲಿ, ಶಿಮ್ಲಾ, ನೈನಿತಾಲ್‌ಗಳತ್ತ ಹೋಗುತ್ತಿದ್ದಾರೆ!

***

ಗುಂಡ: ಡಾರ್ಲಿಂಗ್, ನಿನಗಾಗಿ ನನ್ನ ಪ್ರೀತಿಯ ಆಳವನ್ನು ವ್ಯಕ್ತಪಡಿಸಲು ತಾಜ್ ಮಹಲ್ ಕಟ್ಟಿಸಲೆ?

ಶ್ರೀಮತಿ ಗುಂಡ: ನೀವು ಪ್ರತ್ಯೇಕವಾಗಿ ತಾಜ್ ಮಹಲ್ ಕಟ್ಟಿಸುವ ಅವಶ್ಯಕತೆ ಇಲ್ಲ ಡಾರ್ಲಿಂಗ್. ಪ್ರತಿನಿತ್ಯ ಪಾತ್ರೆಗಳನ್ನು ತೊಳೆದು, ಬಟ್ಟೆ ಒಗೆದು ಹಾಕಿದರಷ್ಟೇ ಸಾಕು!

***

ಗುಂಡ ಸ್ವಯಂ ಆತ್ಮ ನಿರ್ಭರನಾಗಿರಲು ಪ್ರಯತ್ನಿಸಿದ. ಅಡುಗೆ ಮನೆಗೆ ಹೋಗಿ ನಾಲ್ಕು ಬ್ರೆಡ್ ಸ್ಲೈಸ್ ಬಿಸಿ ಮಾಡಿಕೊಂಡು ಅದಕ್ಕೆ ಇದ್ದ ಚಟ್ನಿಯೆಲ್ಲಾ ಸವರಿ ತಿಂದುಬಿಟ್ಟ. ಇದಾಗಿ ಒಂದು ಗಂಟೆಯಿಂದ ಆತ ತುಟಿಪಿಟಿಕ್ಕೆನ್ನದೆ ಕೂತಿದ್ದಾನೆ.

ಆತನ ಪತ್ನಿ ಪದೇ ಪದೇ ಮನೆಮಂದಿಯನ್ನೆಲ್ಲಾ ವಿಚಾರಿಸುತ್ತಿದ್ದಾಳೆ, 'ಮದರಂಗಿ ಪುಡಿ ನೆನೆಸಿಟ್ಟಿದ್ದೆ, ಅದೆಲ್ಲಿ ಮಾಯವಾಯಿತು?' ಗುಂಡ ಮೌನಿಯಾಗಿದ್ದಾನೆ!

***

ಶ್ರೀಮತಿ ಗುಂಡ: ರೀ, ನೆರೆಮನೆಯಾತ ಈ ಕೋವಿಡ್ ಕಾಲದಲ್ಲಿ ದ್ವಿದಳ ಧಾನ್ಯಗಳ ಬೆಲೆ ಹೆಚ್ಚಾದ ಕಾರಣಕ್ಕೆ ಅಸುನೀಗಿದ್ದಂತೆ.

ಗುಂಡ: ನಿನಗ್ಯಾರು ಹೇಳಿದ್ದು?

ಶ್ರೀಮತಿ ಗುಂಡ: ಅವರ ಹೆಂಡತಿಯ ಕೈಯಲ್ಲಿದ್ದ ಡೆತ್ ಸರ್ಟಿಫಿಕೇಟನ್ನು ನಾನು ಸ್ವತಃ ಕಂಡೆ ಕಣ್ರೀ. ಅದರಲ್ಲಿ, 'ಡೆತ್ ಡ್ಯೂ ಟು ಹೈ ಪಲ್ಸ್ ರೇಟ್ ಡ್ಯೂರಿಂಗ್ ಕೋವಿಡ್' ಅಂತ ಬರೆಯಲಾಗಿತ್ತು ಕಣ್ರೀ!

***

ಗುಂಡ: ನಮ್ಮ ಮನೆಯ ನಾಯಿಗೆ ತುಂಬಾ ಜಾಣ್ಮೆಯಿದೆ, ದಿನಾ ಬೆಳಿಗ್ಗೆ ಏಳು ಗಂಟೆಗೆ ಸರಿಯಾಗಿ ಅದು ನಮ್ಮ ಮನೆಗೆ ನ್ಯೂಸ್ ಪೇಪರ್ ತಂದು ಹಾಕುತ್ತದೆ.

ಪುಂಡ: ಅದೇನು ಮಹಾ, ನಮ್ಮ ಮನೆಯ ನಾಯಿಯೂ ಪ್ರತಿ ದಿನ ಈ ಕೆಲಸ ಮಾಡುತ್ತದೆ. ಪೇಪರ್ ಅಂಗಡಿಯವನು ದಿನಂಪ್ರತಿ ಅದರ ಬಳಿಯೇ ನೀಡುತ್ತಾನೆ.

ಗುಂಡ: ನಮ್ಮದು ಬೇರೆಯವರ ಮನೆ ಅಂಗಳದಲ್ಲಿ ಹಾಕಿರುವ ಪೇಪರ್ ತರುತ್ತೆ ಮಾರಾಯ!

***

ಸಂದರ್ಶಕ: ನೀನು ಹತ್ತನೇ ಹಾಗೂ ಹನ್ನೆರಡನೇ ತರಗತಿಯನ್ನು ಯಾವಾಗ ಮುಗಿಸಿದ್ದು?

ಅಭ್ಯರ್ಥಿ: ಕೋವಿಡ್ 19ರ ಕಾಲದಲ್ಲಿ.

ಸಂದರ್ಶಕ: ಸರಿ ಹಾಗಾದರೆ; ಮನೆಯಲ್ಲೇ ಇರು, ಸುರಕ್ಷಿತನಾಗಿರು ( ಸ್ಟೇ ಹೋಮ್, ಸ್ಟೇ ಸೇಫ್)!

***

ಲಾಕ್ ಡೌನಿನಲ್ಲಿ... ಶವ ಸಂಸ್ಕಾರಕ್ಕೆ ಕೇವಲ 20 ಜನರು ಸೇರಲು ಅವಕಾಶವಿದೆ. ಏಕೆಂದರೆ ಅದಾಗಲೇ 'ಸ್ಪಿರಿಟ್' ದೇಹದಿಂದ ಹೊರಗೆ ಹೋಗಿರುತ್ತದೆ.

ಆದರೆ ಮದ್ಯದಂಗಡಿಗಳಲ್ಲಿ ನೂರಾರು ಜನರು ಸೇರಲು ಅವಕಾಶವಿದೆ. ಏಕೆಂದರೆ ಅಲ್ಲಿ 'ಸ್ಪಿರಿಟ್' ಇನ್ನೂ ದೇಹ ಸೇರಬೇಕಾಗಿದೆ!

***

ಗುಂಡನ ಮನೆಗೆ ನೆಂಟರು ಬಂದಿದ್ದರು. ಅಡುಗೆ ಮನೆಯಿಂದ ಅಮ್ಮ ಗುಂಡನಿಗೆ ಹೇಳಿದರು, 'ಅವರು ಊಟ ಮಾಡುತ್ತಾರೆಯೇ ಎಂದು ವಿಚಾರಿಸು' ಗುಂಡ ಅತಿಥಿಗಳಲ್ಲಿ ಕೇಳಿದ, 'ನೀವು ಊಟ ಮಾಡಿ ಬಂದಿರುವಿರಾ ಅಥವಾ ಮನೆಗೆ ಹೋಗಿ ಊಟ ಮಾಡುತ್ತೀರಾ?'

***

ಶ್ರೀಮತಿ ಗುಂಡ: ನನ್ನ ಪತಿ ಒಂದು ವಾರದಿಂದ ಕಾಣೆಯಾಗಿದ್ದಾರೆ.

ಪೊಲೀಸ್ ಅಧಿಕಾರಿ: ಅವರ ಗುರುತೇನಾದರೂ ನಿಮ್ಮ ಬಳಿ ಇದೆಯೇ? ತಕ್ಷಣ ಹೌದೆನ್ನುತ್ತಾ ಶ್ರೀಮತಿ ಗುಂಡ ತನ್ನೊಂದಿಗೆ ಬಂದಿದ್ದ ನಾಲ್ಕು ವರ್ಷದ ಮರಿಗುಂಡನನ್ನು ತೋರಿಸಿದಳು!

***

ಕಾಲೇಜು ವಿದ್ಯಾರ್ಥಿ ಗುಂಡನನ್ನು ಮನೆ ಮಂದಿ, 'ಕೂತ್ಕೋ, ನಿನ್ನಲ್ಲಿ ಸ್ವಲ್ಪ ಮಾತಾಡಲಿಕ್ಕಿದೆ' ಎಂದಾಗಲಷ್ಟೇ ಆತನಿಗೆ ತಾನು ಕಾಲೇಜಿನಲ್ಲಿ ಎಸಗಿದ ಕರ್ಮ ಕಾಂಡಗಳ ನೆನಪು ಸ್ಲೈಡ್ ಶೋನಂತೆ ಸ್ಮೃತಿಪಟಲದಲ್ಲಿ ಒಂದೊಂದಾಗಿ ಮೂಡಲಾರಂಭಿಸುತ್ತದೆ!

***

ವಿವಾಹಿತ ಗುಂಡ ಸ್ವಾಮಿಯವರ ಅನುಭವಾಮೃತದ ಒಂದು ತುಣುಕು, 'ವೈವಾಹಿಕ ಜೀವನದ ಆನಂದವೇ ಬೇರೆ. ಹೊಟ್ಟೆಗೇನಾದರೂ ಊಟ ಸಿಕ್ಕರೂ ಸಿಗದಿದ್ದರೂ ಅದೇನೂ ದೊಡ್ಡ ವಿಷಯವಾಗುವುದಿಲ್ಲ... ಏಕೆಂದರೆ ಎರಡೂ ಕಿವಿಗಳಿಗೂ ಕೇಳಲು ಬೇಕಾದಷ್ಟು ಸಿಗುತ್ತಿರುತ್ತದೆ!'

(ಸಂಗ್ರಹ): ರಮಣ್ ಶೆಟ್ಟಿ ರೆಂಜಾಳ್, ಮುಂಬಯಿ

